Online Newspaper Clipping Service

**Dated - Wednesday, 04th, October– 2017**

**Pg.No.A-1**

ವಿಜಯ ಕರ್ನಾಟಕ

# ಇಂದು ನಗರಕ್ಕೆ ವರುಣ್ ಗಾಂಧಿ

**ಕೋಲಾರ:** ನಗರದ ಟಮದಲ್ಲಿರುವ ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರಕ್ಕೆ ಸಂಸದ ಫಿರೋಜ್ ವರುಣ್ ಗಾಂಧಿ ಅವರು ಇದೇ 4ರ ಬುಧವಾರ ಬೆಳಗ್ಗೆ 11 ಗಂಟೆಗೆ ಭೇಟಿ ನೀಡಲಿದ್ದಾರೆ. ವಿದ್ಯಾಲಯದ ರಜತ ಮಹೋತ್ಸವ ಸಭಾಂಗಣದಲ್ಲಿ 'ಸಾಮಾಜಿಕ ಮತ್ತು ರಾಜಕೀಯ ಸುಧಾರಣೆ' ಕುರಿತು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲಿದ್ದಾರೆ. ನಂತರ ವೈದ್ಯಕೀಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ವಿಜಯವಾಣಿ



# ಕೋಲಾರಕ್ಕೆ ನಾಳೆ ವರುಣ್ ಗಾಂಧಿ ಭೇಟಿ

**ಕೋಲಾರ:** ನಗರ ಹೊರವಲಯದ ಟಮಕದಲ್ಲಿರುವ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದಲ್ಲಿ ಅ.5ರಂದು ಬೆಳಗ್ಗೆ 11ಕ್ಕೆ ಸಾಮಾಜಿಕ ಮತ್ತು ರಾಜಕೀಯ ಸುಧಾರಣೆ ವಿಷಯಕ್ಕೆ ಸಂಬಂಧಿಸಿದ ಉಪನ್ಯಾಸ ಹಾಗೂ ವಿದ್ಯಾರ್ಥಿಗಳೊಂದಿಗೆ ಹಮ್ಮಿಕೊಂಡಿರುವ ಸಂವಾದ ಕಾರ್ಯಕ್ರಮದಲ್ಲಿ ಬಿಜೆಪಿ ಸಂಸದ ವರುಣ್ ಗಾಂಧಿ ಭಾಗವಹಿಸಲಿದ್ದಾರೆ. ವರುಣ್ ಗಾಂಧಿ ಸೋದರ ಎಐಸಿಸಿ ಉಪಾಧ್ಯಕ್ಷ



ರಾಹುಲ್‌ಗಾಂಧಿ ಈಗಾಗಲೇ ದೇಶ-ವಿದೇಶಗಳಲ್ಲಿ ಸಂಚರಿಸಿ ಶಾಲೆ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಭಾಷಣ ಹಾಗೂ ಸಂವಾದ ನಡೆಸಿದ್ದು, ಅಣ್ಣನಂತೆ ತಮ್ಮ ವರುಣ್‌ಗಾಂಧಿ ಸಹ ಭಾಷಣ ಮತ್ತು ಸಂವಾದದ ಮೂಲಕ ವಿದ್ಯಾರ್ಥಿ ಸಮೂಹ ಆಕರ್ಷಿಸಲು ಹೊರಟಿದ್ದಾರೆ. ಜಿಲ್ಲೆಗೆ ಪ್ರಪ್ರಥಮವಾಗಿ ವರುಣ್ ಗಾಂಧಿ ಬರುತ್ತಿದ್ದು, ಪಕ್ಷದ ಯುವ ನಾಯಕ ಬರುವ ವಿಚಾರ ಗೌಪ್ಯವಾಗಿ ಇಟ್ಟಿರುವುದರಿಂದ ಜಿಲ್ಲೆಯ ಬಿಜೆಪಿ ಮುಖಂಡರಿಗೆ ಯುವ ನಾಯಕನನ್ನು ಸ್ವಾಗತಿಸುವ ಭಾಗ್ಯ ಸಿಗುವುದೇ ನೋಡಬೇಕು.

ವಿಜಯ ಕರ್ನಾಟಕ

Pg.No.A-1

# ಇಂದು ಉಚಿತ ಹೃದಯ ಆರೋಗ್ಯ ತಪಾಸಣೆ ಶಿಬಿರ

**ಕೋಲಾರ:** ವಿಶ್ವ ಹೃದಯ ದಿನದ ಅಂಗವಾಗಿ ಇದೇ 4ರ ಬುಧವಾರ ಆರ್.ಎಲ್.ಜಾಲಪ್ಪ-ನಾರಾಯಣ ಹಾರ್ಟ್ ಸೆಂಟರ್ ಸಹಯೋಗದೊಂದಿಗೆ ನಗರದ ಅಂತರಗಂಗೆ ರಸ್ತೆಯಲ್ಲಿರುವ ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ 'ಉಚಿತ ಹೃದಯ ಆರೋಗ್ಯ ತಪಾಸಣಾ ಶಿಬಿರ'ವನ್ನು ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 10ರಿಂದ ಸಂಜೆ 4 ಗಂಟೆ ವರೆಗೆ ನಡೆಯುವ ಈ ಆರೋಗ್ಯ ಶಿಬಿರದಲ್ಲಿ ನುರಿತ ವೈದ್ಯರಿಂದ ತಪಾಸಣೆ, ರಕ್ತ ದೊತ್ತಡ ಪರೀಕ್ಷೆ, ಇ.ಸಿ.ಜಿ., ಎಕೋ ಸ್ಕ್ರೀನಿಂಗ್‌ಗಳನ್ನು ಉಚಿತವಾಗಿ ಮಾಡಲಾಗುವುದು. ಆದ್ದರಿಂದ ಸಾರ್ವಜನಿಕರು ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ತಿಳಿಸಿದೆ.

ಕೋಲಾರಪತ್ರಿಕೆ

# ಕೋಲಾರಕ್ಕೆ ಇಂದು ವರುಣ್‌ಗಾಂಧಿ ಭೇಟಿ

ಕೋಲಾರ ಅ ೪

ಲೋಕಸಭಾ ಸದಸ್ಯ ಫಿರೋಜ್ ವರುಣ್ ಗಾಂಧಿ ಅವರು ಇಂದು ಬೆಳಿಗ್ಗೆ ೧೧ಕ್ಕೆ ಟಮಕದಲ್ಲಿರುವ ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ 'ಸಾಮಾಜಿಕ ಮತ್ತು ರಾಜಕೀಯ ಸುಧಾರಣೆ' ಕುರಿತು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡುವರು.. ವೈದ್ಯಕೀಯ ವಿದ್ಯಾರ್ಥಿಗಳೊಡನೆ ಸಂವಾದವನ್ನು ಸಹ ನಡೆಸಲಿದ್ದಾರೆ.